# ಕರ್ನಾಟಕ ಸರ್ಕಾರ

ಸಂ:ಗ್ರಾಅಪ09 ಗ್ರಾನೀಸ(2) 2017

2ನೇ ಮಹಡಿ, 'ಇ' ಬ್ಲಾಕ್,
ಕರ್ನಾಟಕ ಗೃಹ ಮಂಡಳಿ ಸಂಕೀರ್ಣ, ಕಾವೇರಿ ಭವನ,
ಕೆ.ಜಿ. ರಸ್ತೆ, ಬೆಂಗಳೂರು-09, ದಿನಾಂಕ:09.11.2017

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳು

**ಮಾನ್ಯರೇ,**

**ವಿಷಯ:** 2017-18ನೇ ಸಾಲಿನ NRDWP – Support Activity ಯೋಜನೆಗಳ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆ ಕುರಿತು.

**ಉಲ್ಲೇಖ:**
1. ದಿನಾಂಕ:19.07.2017ರಂದು ಜರುಗಿದ SLSSC ಸಭೆಯಲ್ಲಿ ನೀಡಿರುವ ಅನುಮೋದನೆ.
2. ನಿರ್ದೇಶಕರು, WSSO ರವರ ಟಿಪ್ಪಣಿ ಸಂಖ್ಯೆ: RDW&SD/WSSO/AAP-IEC/ಕ್ರಿ.ಯೋ./08/2017-18, ದಿನಾಂಕ:09.11.2017

---

**2017-18ರ** ಸಾಲಿನ NRDWP – Support Activity ಯೋಜನೆಗಳ ಕ್ರಿಯಾ ಯೋಜನೆಯನ್ನು NRDWP ಮಾರ್ಗಸೂಚಿಗಳನ್ವಯ ಜಿಲ್ಲಾ ಪಂಚಾಯತಿಗಳಿಂದ ಅಧಿಕೃತ ಪ್ರಸ್ತಾವನೆಗಳನ್ನು ಪಡೆದು, ಸಮಗ್ರ ಪರಿಶೀಲನೆಯೊಂದಿಗೆ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಕಳುಹಿಸಲು ನಿರ್ದೇಶಕರು, ನೀರು ಮತ್ತು ನೈರ್ಮಲ್ಯ ನೆರವು ಸಂಸ್ಥೆ (WSSO) ರವರಿಗೆ ಸೂಚಿಸಲಾಗಿತ್ತು. ಅದರಂತೆ, ಮೇಲ್ಕಂಡ ಉಲ್ಲೇಖಿತ ಟಿಪ್ಪಣಿಯ ಮುಖೇನ ನಿರ್ದೇಶಕರು, ನೀರು ಮತ್ತು ನೈರ್ಮಲ್ಯ ನೆರವು ಸಂಸ್ಥೆ (WSSO) ರವರಿಂದ ಸ್ವೀಕೃತಿಯಾಗಿರುವ ಕೆಳಕಂಡ Support Activity ಪ್ರಸ್ತಾವನೆಗೆ **(Appendix-1, 2, 3 & 4)** ಸರ್ಕಾರದ ಅನುಮೋದನೆ ನೀಡಿದೆ.

**1. IEC Activity 2. HRD Activity 3. Establishment & Allied components 4. Abstract**

ಮೇಲ್ಕಂಡ ಚಟುವಟಿಕೆಗಳಡಿ ಕೇಂದ್ರ ಹಾಗೂ ರಾಜ್ಯ ವಲಯದ ಎಲ್ಲಾ ಕುಡಿಯುವ ನೀರಿನ **IEC, HRD, BRCs & CRCs Salary component** ಸೇರಿವೆ. ಅದರಂತೆ, ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತಿಗಳ **Support Activity (Spillover & Fresh Activity ಸೇರಿ)**ಗಳ **ರೂ.1440.81ಲಕ್ಷ (ಒಂದು ಸಾವಿರದ ನಾಲ್ಕು ನೂರಾ ನಲವತ್ತು ದಶಾಂಶ ಎಂಭತ್ತೊಂದು ಲಕ್ಷ ರೂಪಾಯಿಗಳು)** ಅಂದಾಜು ಮೊತ್ತದ ಕ್ರಿಯಾ ಯೋಜನೆಯ ಘೋಷ್ವಾರೆಗೆ ಸರ್ಕಾರದ ಅನುಮೋದನೆ ನೀಡಿದೆ. ಈ ಕ್ರಿಯಾ ಯೋಜನೆಯನ್ವಯ ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಭಾರತ ಸರ್ಕಾರದ ಮಾರ್ಗಸೂಚಿಗಳನ್ವಯ **IMIS**ನಲ್ಲಿ ಕೂಡಲೇ ದಾಖಲಿಸಿ, ದೃಢೀಕರಿಸಿ, ಪ್ರಸಕ್ತ ಸಾಲಿನ ಪ್ರಗತಿಯನ್ನು ಜಾಗ್ರತೆಯಾಗಿ ದಾಖಲಿಸತಕ್ಕದ್ದೆಂದು ತಿಳಿಸಿದೆ. ಈ ಅನುಮೋದಿತ **Support Activity** ಕ್ರಿಯಾ ಯೋಜನೆಯನ್ವಯ ಜಿಲ್ಲಾವಾರು ಆರ್ಥಿಕ ಗುರಿಯ ದೃಢೀಕೃತ ಪ್ರತಿ **(Appendix-1, 2, 3 & 4)** ಅಡಕ ಮಾಡಿದೆ. ಈ ಕ್ರಿಯಾ ಯೋಜನೆಯಲ್ಲಿ ನಮೂದಿಸಿರುವ **ಭೌತಿಕ ಗುರಿಗಳಲ್ಲಿ ಸರ್ಕಾರದ ಲಿಖಿತ ಅನುಮತಿ/ ಅನುಮೋದನೆ ಪಡೆಯದೆ ಯಾವುದೇ ಬದಲಾವಣೆಗಳನ್ನು ಮಾಡಿಕೊಳ್ಳತಕ್ಕದ್ದಲ್ಲವೆಂದು ಹಾಗೂ ಬದಲಾದ ಗುರಿಯನ್ನು IMISನಲ್ಲಿ ದಾಖಲಿಸಲು ಅವಕಾಶವಿಲ್ಲವೆಂದು ತಿಳಿಸಿದೆ. IMISನಲ್ಲಿ** ಸರ್ಕಾರದಿಂದ ಅಧಿಕೃತವಾಗಿ ಅನುಮೋದನೆಯಾದಂತೆ ದಾಖಲಿಸಿರುವ **ಕ್ರಿಯಾ ಯೋಜನೆಯನ್ವಯ ಮಾತ್ರ ಕಾರ್ಯಕ್ರಮ/ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ RTGS** ಮುಖೇನ ಬಿಲ್ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ಯಾವುದೇ ಅನಧಿಕೃತ/ ಅನುಮೋದನೆಯಾಗದ ಚಟುವಟಿಕೆ ಅಥವಾ ಕಾರ್ಯಕ್ರಮವನ್ನು ಸರ್ಕಾರದ ಅನುಮೋದನೆಯಿಲ್ಲದೆ **IMISನಲ್ಲಿ ದಾಖಲಿಸಿ** ಅನುಷ್ಠಾನಗೊಳಿಸಿದಲ್ಲಿ, ಅಂತಹ ಚಟುವಟಿಕೆ/ ಕಾಮಗಾರಿಗೆ **ಸಂಬಂಧಿಸಿದಂತೆ, ಜಿಲ್ಲಾ ಪಂಚಾಯತಿಗಳು ಸಲ್ಲಿಸುವ ಬಿಲ್‌ಗಳನ್ನು ಬ್ಯಾಂಕ್ ಮಾನ್ಯ ಮಾಡುವುದಿಲ್ಲ.**

ಆದುದರಿಂದ, ಯಾವುದೇ ಅನಧಿಕೃತ ನೆರವು ಚಟುವಟಿಕೆ/ ಅನುಮೋದನೆಯಾಗದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ, IMISನಲ್ಲಿ ಅಪ್‌ಲೋಡ್ ಮಾಡಿ RTGS ಮುಖೇನ ಬಿಲ್ ಪಾವತಿಗಾಗಿ ಘೋಷಿತ ಬ್ಯಾಂಕ್‌ಗೆ ಕಳುಹಿಸುವಂತಿಲ್ಲ. ಅಂತೆಯೇ, **ನೆರವು ಚಟುವಟಿಕೆ/ಕಾರ್ಯಕ್ರಮಗಳು ಅಧಿಕೃತವಾಗಿ ಸರ್ಕಾರದಿಂದ ಅನುಮೋದನೆಯಾಗಿ ನೀಡಲಾಗಿರುವ ಕ್ರಿಯಾ ಯೋಜನೆಯ ಹಾರ್ಡ್‌ಕಾಪಿ ಪ್ರತಿಯಲ್ಲಿರುವ ಮಾಹಿತಿ ಹಾಗೂ ಅಂಕಿಅಂಶಗಳಿಗೆ ಪೂರಕವಾಗಿರತಕ್ಕದ್ದೆಂದು ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಯಾವುದೇ ಹೊಸ ಚಟುವಟಿಕೆ, ಬದಲಾವಣೆ ಕಾರ್ಯಕ್ರಮ ಅಳವಡಿಸಬೇಕಾದಲ್ಲಿ ಸರ್ಕಾರದ ಲಿಖಿತ ಅನುಮತಿ ಪಡೆಯಬೇಕು. ಜೊತೆಗೆ, ಅಂತಹ ಕಾರ್ಯಕ್ರಮಗಳ ಸೇರ್ಪಡೆಯು NRDWP ಮಾರ್ಗಸೂಚಿಗಳನ್ವಯವೇ ಇರಬೇಕು.** ಅದರಂತೆ, ಸರ್ಕಾರದ ಅಧಿಕೃತ ಅನುಮೋದನೆ/ ಲಿಖಿತ ಅನುಮತಿ ಪಡೆದು, ಕೇಂದ್ರ ಸರ್ಕಾರವು ನೀಡಿರುವ ID ಮುಖೇನ ಮುಖ್ಯ ಇಂಜಿನಿಯರ್, RDW&SD/ Director, WSSO ರವರು ಮೇಲ್ಕಂಡ ನಿಬಂಧನೆಗೊಳಪಟ್ಟು 31 RDW&SD ಇಂಜಿನಿಯರಿಂಗ್ ವಿಭಾಗಗಳು IEC/HRD ಚಟುವಟಿಕೆಗಳ ಹೆಚ್ಚುವರಿ ಅನುದಾನಕ್ಕೆ ಪೂರಕವಾಗಿ ಸಲ್ಲಿಸುವ ಇಂತಹ ಮಾಹಿತಿ uploading ಪರಿಕ್ರಮಗಳನ್ನು ಮಾಡಬೇಕು. ಅಂತೆಯೇ, ಸದರಿ ಬಾಬ್ತಿನ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರಗಳನ್ನು ಸಹ IMISನಲ್ಲಿ ಪ್ರತಿಬಿಂಬಿಸಲು ಕ್ರಮವಹಿಸತಕ್ಕದ್ದು.

ಅಧೀಕ್ಷಕ ಅಭಿಯಂತರರು, RDW&SD ವೃತ್ತ ಕಛೇರಿಗಳು ಮತ್ತು CE, RDW&SD/ Director, WSSO ರವರು ಮೇಲ್ಕಂಡ ಪರಿಕ್ರಮಗಳನ್ನು ಅನುಸರಿಸುವಾಗ, ಜಿಲ್ಲಾ ಪಂಚಾಯತಿಗಳು ಹಾಗೂ RDW&SD ಅಧಿಕಾರಿಗಳು NRDWP Support Activity ಮಾರ್ಗಸೂಚಿಗಳನ್ನು ಸಾರ್ವಜನಿಕ ಹಿತಾಸಕ್ತಿ ಹಿನ್ನೆಲೆಯಲ್ಲಿ ಪಾಲಿಸಿರುವ ಕುರಿತು ಪ್ರತಿವಾರ/ ಮಾಹೆ ಖಾತ್ರಿ ಪಡಿಸಿಕೊಂಡು, ರಾಜ್ಯದ ಪ್ರಗತಿಯನ್ನು ಕೇಂದ್ರಕ್ಕೆ ವರದಿ ಮಾಡಲು ಜಾಗ್ರತೆವಹಿಸತಕ್ಕದ್ದೆಂದು ತಿಳಿಸಿದೆ.

**ಯಾವುದೇ ಮುಂದುವರೆದ ನೆರವು ಚಟುವಟಿಕೆಗಳು/ಕಾರ್ಯಕ್ರಮಗಳನ್ನು ಪ್ರಥಮ ಆದ್ಯತೆಯೆಂದು ಪರಿಗಣಿಸಿ, ದಿನಾಂಕ: 31.03.2018ರೊಳಗೆ ಪೂರ್ಣಗೊಳಿಸತಕ್ಕದ್ದು.**

ಅನುದಾನಿತ ಕ್ರಿಯಾ ಯೋಜನೆಯನ್ನು ಈಗಾಗಲೇ ನಿಗದಿಪಡಿಸಿರುವ ಅನುದಾನದ ಮಿತಿಯೊಳಗೇ (Appendix-1, 2, 3 & 4) ಆದ್ಯತೆಯ ಮೇಲೆ ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು. ಜೊತೆಗೆ, ಒಟ್ಟಾರೆ ಕೈಗೊಳ್ಳುವ ನೆರವು ಚಟುವಟಿಕೆಗಳ ವೆಚ್ಚವು, ನಿಗದಿತ ಅನುದಾನ ಮೀರದಂತೆ ಕ್ರಮ ಕೈಗೊಳ್ಳುವುದು. ಹೊಸ ನೆರವು ಚಟುವಟಿಕೆಗಳನ್ನು ಅನುಷ್ಠಾನಕ್ಕೆ ಪರಿಗಣಿಸುವಾಗ, ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಂಡು ಫಲಪ್ರದವಾಗುವ ನೆರವು ಚಟುವಟಿಕೆಗಳಿಗೆ ಪ್ರಥಮ ಆದ್ಯತೆ ನೀಡಿ ನಂತರ, ನಿಗದಿತ ಅನುದಾನದಲ್ಲಿ ಲಭ್ಯವಿರುವ ಮಿತಿಯೊಳಗೇ ಬಾಕಿ ನೆರವು ಚಟುವಟಿಕೆಗಳ ಅನುಷ್ಠಾನಕ್ಕೆ ಕ್ರಮವಹಿಸತಕ್ಕದ್ದು ಎಂಬ ಷರತ್ತಿಗೆ ಒಳಪಟ್ಟಿದೆ.

ಮೇಲ್ಕಂಡ ಸೂಚನೆಗಳನ್ವಯ ಅನುಮೋದಿತ ಕ್ರಿಯಾ ಯೋಜನೆಯಂತೆ, ಮೊದಲ ಆದ್ಯತೆಯಲ್ಲಿ CE, RDW&SD/ Director, WSSO ರವರು ನೀಡುವ ವೇಳಾ ಪಟ್ಟಿಯಂತೆ NRDWP Support Activity ಅಂಶಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,

ಆಯುಕ್ತರು
ಹಾಗೂ ಸರ್ಕಾರದ ಪದನಿಮಿತ್ತ ಕಾರ್ಯದರ್ಶಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

**ಇವರಿಗೆ ಪ್ರತಿ:**

1. ಮುಖ್ಯ ಅಭಿಯಂತರರು, ಗ್ರಾ.ಕು.ನೀ.ನೈ. ಇಲಾಖೆ, 1ನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಸಂಕೀರ್ಣ, ಕಾವೇರಿ ಭವನ, ಬೆಂಗಳೂರು–9 – ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
2. ನಿರ್ದೇಶಕರು, WSSO, ಗ್ರಾ.ಕು.ನೀ.ನೈ. ಇಲಾಖೆ, 2ನೇ ಮಹಡಿ, ಕಾವೇರಿ ಭವನ, ಬೆಂಗಳೂರು–9 – ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
3. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.ನೈ. ಇಲಾಖೆ, ಕಾವೇರಿ ಭವನ, ಬೆಂಗಳೂರು–9 – ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
4. ಎಲ್ಲಾ (4) ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.ನೈ. ಇಲಾಖೆ, ಬೆಂಗಳೂರು, ಬೆಳಗಾವಿ, ಕಲಬುರ್ಗಿ ಮತ್ತು ಮೈಸೂರು ವೃತ್ತ
5. ಕಾರ್ಯಪಾಲಕ ಅಭಿಯಂತರರು, ಎಲ್ಲಾ 31 ಗ್ರಾ.ಕು.ನೀ.ನೈ. ವಿಭಾಗಗಳು – ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು – ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಕಛೇರಿ ಕಡತಕ್ಕಾಗಿ – ದಾಖಲೆ ರೂಪದಲ್ಲಿ.